†ಶ್ರೀಮತಿ ಅನಸೂಯ ಗಜಾನನ ಶರ್ಮ (ಅಂಕೋಲ).—ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಮಂತ್ರಿಗಳು ಈ ಸಪ್ಲಿಮೆಂಟರಿ ಬಡ್ಜೆಟನ್ನು ಪಾಸ್ ಮಾಡಿ ಕೊಡಬೇಕೆಂದು ಕೇಳಿದ್ದಾರೆ. ಇದರ ಬಗ್ಗೆ ಹೇಳಬೇಕೆಂದರೆ, ನಾವು ಕೋಟಿಗಟ್ಟಲೆ ಹಣವನ್ನು ಇವರಿಗೆ ಪಾಸ್ ಮಾಡಿಕೊಡುತ್ತೇವೆ. ನಂತರ ಆ ಹಣ ಎಲ್ಲಿ ಹೋಗುತ್ತದೆಂದು ವಿಚಾರ ಮಾಡಬೇಕಾಗಿದೆ. ನಮಗೆ ಸ್ವಾತಂತ್ರ್ಯ ಬಂದು ೩೦ ವರ್ಷಗಳಾದ ಮೇಲೂ ಸಹ ಹಳ್ಳಿಯ ಜನರು ಬಸ್ಸಿಗಾಗಿ ಬಂದು ೧೦-೧೫ ಮೈಲಿಗಳವರೆಗೆ ನಡೆಯಬೇಕಾಗಿದೆ. ಖಾಯಿಲೆ ಬಂದವರನ್ನು ೧೦-೧೫ ಮೈಲಿ ದೂರದಲ್ಲಿರುವ ದವಾಖಾನೆಗೆ ಕಂಬಳಿ ಜೋನೆಯಲ್ಲಿ ಹೊತ್ತು ಕೊಂಡು ಒಯ್ಯಬೇಕಾದ ಪರಿಸ್ಥಿತಿ ನಮ್ಮ ಕಡೆಯಲ್ಲಿ ಇನ್ನೂ ತಪ್ಪಿಲ್ಲ. ಮಳೆಗಾಲದಲ್ಲಿ ಮಕ್ಕಳು ತಮ್ಮ ಬಟ್ಟೆಗಳನ್ನು ಬಿಚ್ಚಿ ತಲೆಯ ಮೇಲಿಟ್ಟುಕೊಂಡು ಹೊಳೆಯನ್ನು ದಾಟಿ ಶಾಲೆಗೆ ಹೋಗಬೇಕಾಗಿದೆ. ಬೆಂಗಳೂರು ಹಾಗೂ ದೊಡ್ಡ ದೊಡ್ಡ ಊರುಗಳನ್ನು ನೋಡಿಕೊಂಡು ಏನೂ ಹೇಳುವುದಕ್ಕೆ ಬರುವುದಿಲ್ಲ. ಆದರೆ ನಮ್ಮ ಹಳ್ಳಿಗಳಿಗೆ ತಾವು ಬಂದರೆ ಅಲ್ಲಿಯ ಪರಿಸ್ಥಿತಿ ಏನಿದೆ ಎಂಬುದನ್ನು ತೋರಿಸುತ್ತೇನೆ. ಅಲ್ಲಿ ಯಾವ ಒಂದು ಸೌಕರ್ಯಗಳೂ ಇಲ್ಲ. ಇಂತಹ ಒಂದು ಪರಿಸ್ಥಿತಿ ಇದೆ. ಇದಕ್ಕೆ ಕಾರಣವೇನೆಂಬುದನ್ನು ವಿಚಾರ ಮಾಡಬೇಕಾಗಿದೆ. ಭ್ರಷ್ಟಾಚಾರದ ಬಗ್ಗೆ ಎಲ್ಲರೂ ಮಾತನಾಡಿದ್ದಾರೆ. ಹಿರಿಯ ಮಕ್ಕಳ ಚಾಳಿ ಮನೆ ಮಕ್ಕಳಿಗೆಲ್ಲಾ ಎಂಬಂತೆ ಈ ವಿಚಾರದಲ್ಲಿ ನಾನು ಕಂಡ ಒಂದು ಉದಾಹರಣೆ ಹೇಳುತ್ತೇನೆ. ನಾನು ಕಾರವಾರ ಜಿಲ್ಲೆಯ ಅಂಕೋಲ ಮತದಾರರ ಕ್ಷೇತ್ರದಿಂದ ಆರಿಸಿ ಬಂದಿದ್ದೇನೆ. ಅಲ್ಲಿರುವ ಭೂನ್ಯಾಯ ಮಂಡಲಿಯಲ್ಲಿ ೩ ಜನ ಕಾಂಗ್ರೆಸ್ (ಐ) ಸದಸ್ಯರಿದ್ದಾರೆ. ನಾನೂ ಕೂಡ ಅದರಲ್ಲಿದ್ದೇನೆ. ಕಳೆದ ತಿಂಗಳ ೨೩ನೇ ತಾರೀಖು ಈ ಸದಸ್ಯರುಗಳು ಕೆಲವರಿಂದ ಲಂಚ ಪಡೆದ ಸಂದ್ಧಿ ಸಂಯುಕ್ತ ಕರ್ನಾಟಕ, ಪ್ರಜಾವಾಣಿ ಹಾಗೂ ಡೆಕ್ಕನ್‌ಹೆರಾಲ್ಡ್ ಪತ್ರಿಕೆಗಳಲ್ಲಿ ಬಂದಿವೆ. ಈ ವಿಚಾರದಲ್ಲಿ ನಾನು ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸ್ ಕೊಟ್ಟು ೭-೮ ದಿವಸಗಳಾದರೂ ಸಹ ಸರ್ಕಾರದಿಂದ ಇನ್ನೂ ಉತ್ತರ ಬಂದಿಲ್ಲ. ಈ ಬಗ್ಗೆ ಇನ್ನೂ ಅಲ್ಲಿಂದ ವಿವರಗಳು ಬಂದಿಲ್ಲವೆಂದು ಹೇಳುತ್ತಾರೆ. ಈ ಘಟನೆ ನಡೆದು ಒಂದು ತಿಂಗಳಾದ ಮೇಲೂ ಸಹ ಇವೊತ್ತಿನವರೆಗೂ ವಿಚಾರಣೆಯಾಗಿಲ್ಲ. ಅಂದರೆ ಈ ಭೂನ್ಯಾಯ ಮಂಡಲಿಗಳನ್ನು ಏತಕ್ಕೆ ರಚನೆ ಮಾಡಿದ್ದಾರೆ? ಇವುಗಳನ್ನು ಬಡವರ ಹಿತಕ್ಕೆ ಮಾಡಿದ್ದಾರೋ ಅಥವಾ ಈ ಸರ್ಕಾರವನ್ನು ಬೆಂಬಲಿಸುತ್ತಿರುವ ಜನರ ಹಿತಕ್ಕಾಗಿ ಮಾಡಿದ್ದಾರೋ ಗೊತ್ತಿಲ್ಲ. ತಗೆಮಬೇಕಾದವರಿಗೆ ಸೂಕ್ತ ಸ್ಥಾನಮಾನಗಳನ್ನು ಕೊಡಲು ಈ ಭೂನ್ಯಾಯ ಮಂಡಲಿಗಳನ್ನು ರಚನೆ ಮಾಡಿದ್ದಾರೋ ಏನೋ ಎನ್ನುವ ಸಂಶಯ ನನಗೆ ಬಂದಿದೆ. ಹೆಚ್ಚಿನ ಭೂನ್ಯಾಯ ಮಂಡಲಿಗಳಲ್ಲಿ ಇದೇ ತಕರಾರು ಇದೆ. ಇದು ಸರ್ಕಾರದ ಗಮನಕ್ಕೆ ಬಂದಿದ್ದರೂ ಅದರ ಕಡೆಗೆ ಸರಕಾರ ಹೆಚ್ಚಿನ ಲಕ್ಷ್ಯ ವಹಿಸಿಲ್ಲ. ಜನರಿಂದ ಲಂಚ ವಸೂಲಿ ಮಾಡುವುದು ನಡದೇ ಇದೆ. ಈ ರೀತಿ ಭ್ರಷ್ಟಾಚಾರದಿಂದ ಕೂಡಿರತಕ್ಕಂಥ ಭೂನ್ಯಾಯ ಮಂಡಲಿಯವರು ಕೊಡತಕ್ಕಂಥ ತಿರ್ಮಾನವೇ ಕೊನೆಯದು. ಅದರ ಮೇಲೆ ಮತ್ತೆ ಅಪೀಲು ಮಾಡಿಕೊಳ್ಳಲು ಅವಕಾಶವೇ ಇಲ್ಲ. ಒಟ್ಟಿನಲ್ಲಿ ಹೇಳಬೇಕೆಂದರೆ ಹೆಚ್ಚಿನ ಭೂನ್ಯಾಯ ಮಂಡಲಿಗಳು ಕಾಂಗ್ರೆಸ್ ಪಕ್ಷದ ಭೂನ್ಯಾಯಮಂಡಲಿಗಳಾಗಿವೆ. ಇಲ್ಲಿ ನಡೆಯತಕ್ಕಂಥ ಲಂಚದ ಹಾವಳಿಯನ್ನು ನೋಡಿದರೆ, ಇವು ಯಾರ ಹಿತಕ್ಕಾಗಿ ಇವೆ ಎಂದು ತಮ್ಮ ಮೂಲಕ ಸರ್ಕಾರದವರನ್ನು ಕೇಳಬಯಸುತ್ತೇನೆ. ಈ ರೀತಿ ವ್ಯವಹಾರ ನಡೆಯುತ್ತಿರುವಾಗ, ಸರ್ಕಾರದವರು ಕೋಟಿಗಟ್ಟಲೆ ಹಣವನ್ನು ನಾನಾ ಬಾಬುಗಳಿಗೆ ಖರ್ಚು ಮಾಡುವುದನ್ನು ನೋಡಿ ನನಗೆ ಹೆದರಿಕೆಯಾಗುತ್ತಿದೆ. ಈ ರೀತಿ ಖರ್ಚುಮಾಡುತ್ತಿರುವ ಹಣದಲ್ಲಿ ಸ್ವಲ್ಪ ಭಾಗವಾದರೂ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ಹೋಗುತ್ತಿಲ್ಲ. ಇದರಿಂದ ಹಿಂದುಳಿದ ಭಾಗಗಳು ಹಿಂದುಳಿಯುತ್ತಲೇ ಹೋಗುತ್ತಿವೆ.

ಶ್ರೀ ಬಿ. ಎ. ಮೊಹಿದ್ದೀನ್.—ಈ ಬಡ್ಜೆಟಿನಲ್ಲಿ ನಿಮ್ಮ ಜಿಲ್ಲೆಗೆ ಹತ್ತು ಕೋಟಿ ರೂ. ಗಳು ಸಿಗುತ್ತದೆ.

ಶ್ರೀಮತಿ ಅನಸೂಯ ಗಜಾನನ ಶರ್ಮ.—ಒಟ್ಟಿನಲ್ಲಿ ಇಲ್ಲಿ ನಾವು ಪಾಸ್ ಮಾಡಿ ಕೊಡತಕ್ಕಂಥ ಹಣ ಸರಿಯಾಗಿ ಸದುಪಯೋಗವಾಗುತ್ತಿಲ್ಲವೆಂದು ಹೇಳಬಹುದು. ಈ ಮೊದಲು ಮಾತನಾಡಿದವರೆಲ್ಲಾ ಈ ಸರ್ಕಾರದ ಆಡಳಿತದಲ್ಲಿ ಭ್ರಷ್ಟಾಚಾರವೆಂಬುದು ತುಂಬಿತುಳುಕಾಡುತ್ತಿದೆ ಎಂದು ಹೇಳಿದ್ದಾರೆ. ಅದನ್ನೇ ನಾನು ಮತ್ತೊಮ್ಮೆ ಒತ್ತಿ ಹೇಳುತ್ತೇನೆ ಹಿರಿಯ ಸದಸ್ಯರಾದಂಥ ಶ್ರೀ ಆರ್ಮುಗಂ ಅವರು ಐ.ಎ.ಎಸ್. ಅಧಿಕಾರಿಗಳ ಬಗ್ಗೆ ಕೆಲವು ವಿಚಾರಗಳನ್ನು ಹೇಳಿದರು. ಈ ವಿಚಾರದಲ್ಲಿ ನನ್ನ ಒಂದು ದೃಷ್ಟಿಯಲ್ಲಿ ಹೇಳಬೇಕೆಂದರೆ, ಇಂತಹ ಒಂದು ಭ್ರಷ್ಟ ಸರ್ಕಾರದಲ್ಲಿ ನ್ಯಾಯವನ್ನು ಒದಗಿಸಿಕೊಡತಕ್ಕಂಥ ಕೆಲವು ಅಧಿಕಾರಿಗಳಿರುವುದರಿಂದಲೇ ನಮ್ಮ ರಾಜ್ಯದಲ್ಲಿ ಕೆಲವು ಪ್ರಗತಿಪರವಾದಂಥ ಕೆಲಸಗಳಾಗಿವೆ ಎಂದು